**ಡಿ.ಡಬ್ಲ್ಯು-01**

**<u>ಸಾಕ್ಷಿಯನ್ನು ದಿನಾಂಕಃ 02.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ಬಿ.ವಿ.ಎಸ್. ವಕೀಲರಿಂದಃ</u>**

ನನ್ನ ಪ್ರತಿವಾದ ಪತ್ರ ಹಾಗು ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಹಕ್ಕು ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-1** ಎಂದು, ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-2** ಎಂದು, ಮನೆ ಕಟ್ಟಲು ಪಂಚಾಯಿತಿಯವರು ನೀಡಿದ ಅನುಮತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-3** ಎಂದು, ನಮೂನೆ-9 ಮತ್ತು ನಮೂನೆ-11ಎ ಅನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಡಿ.-4** ಮತ್ತು **ನಿ.ಡಿ.-5** ಎಂದು, ಬೆಳತ್ತೂರು ಗ್ರಾಮ ಪಂಚಾಯಿತಿಯವರು ನೀಡಿದ ಧೃಡೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-6** ಎಂದು, ನನ್ನ ಅಂಗಡಿ ಮಳಿಗೆಗೆ ಸಂಬಂಧಿಸಿದಂತೆ ಪಂಚಾಯಿತಿಯವರು ನೀಡಿದ 05 ಲೈಸೆನ್ಸ್ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಡಿ.-7** ರಿಂದ **ನಿ.ಡಿ.-11** ಎಂದು, 07 ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಡಿ.-12** ರಿಂದ **ನಿ.ಡಿ.-18** ಎಂದು, 01 ಒಪ್ಪಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-19** ಎಂದು, 01 ಫೋಟೋ ಹಾಗು 01 ಸಿ.ಡಿ. ಯನ್ನು ಹಾಜರುಪಡಿಸಿದ್ದು ಫೋಟೋವನ್ನು **ನಿ.ಡಿ.-20** ಎಂದು ಮತ್ತು 01 ಸಿ.ಡಿ. ಯನ್ನು **ನಿ.ಡಿ.-21** ಎಂದು ಗುರುತಿಸಲಾಯಿತು.

ದಿನಾಂಕಃ 25.09.2009 ರ ಒಪ್ಪಂದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸದರಿ ದಾಖಲೆಯು ನೋಂದಾಯಿತವಲ್ಲದ ದಾಖಲೆಯಾಗಿದ್ದು ಮತ್ತು ಅದರ ಮೇಲೆ ಸಾಕಷ್ಟು ಮುದ್ರಾಂಕ ಶುಲ್ಕವನ್ನು ಪಾವತಿಸದೇ ಇದ್ದು ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲವೆಂದು ತಕರಾರು ಮಾಡಿರುತ್ತಾರೆ). ಆದ್ದರಿಂದ ಸದರಿ ದಾಖಲೆಯ ಮೇಲೆ ವಾದವನ್ನು ಆಲಿಸುವ ಸಲುವಾಗಿ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**